28/1

# 2010

# ಕನ್ನಡ ಸಾಹಿತ್ಯ

## ಪತ್ರಿಕೆ 1

*ಸಮಯ : 3 ಗಂಟೆ ]* *[ ಗರಿಷ್ಠಾಂಕಗಳು : 300*

**ಸೂಚನೆಗಳು**

*ವಿಭಾಗ* ***A, B*** *ಮತ್ತು* ***C*** *ಗಳಲ್ಲಿನ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಬೇಕು. ಆದರೆ ವಿಭಾಗ* ***D*** *ಯಲ್ಲಿ ಮೂರು ಪ್ರಶ್ನೆಗಳನ್ನಷ್ಟೇ ಆರಿಸಿ ಉತ್ತರಿಸಬೇಕು. ಪ್ರಶ್ನೆಗಳ ಅಂಕಗಳನ್ನು ಆಯಾ ವಿಭಾಗದ ಮುಂದೆಯೇ ನೀಡಲಾಗಿದೆ.*

*ಉತ್ತರಗಳು ಕನ್ನಡದಲ್ಲಿಯೇ ಇರತಕ್ಕದ್ದು.*

SEAL

[Turn over

## ಭಾಗ A

*4×5=20*

*ಒಂದೊಂದು ಪ್ರಶ್ನೆಗೂ 50 ಶಬ್ದಗಳ ಮಿತಿಯಲ್ಲಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.*

**1.** (ಎ) ಇಂದಿನ ಕನ್ನಡದಲ್ಲಿ ಬಳಕೆಯಾಗುತ್ತಿರುವ ವರ್ಣಗಳಾವುವು ? ಪರಿಶೀಲಿಸಿರಿ.

(ಬಿ) ಆಂಡಯ್ಯನ ಕನ್ನಡ ಅಭಿಮಾನದ ಬಗ್ಗೆ ಬರೆಯಿರಿ.

(ಸಿ) 'ವಕ್ರೋಕ್ತಿ'ಯ ಪರಿಕಲ್ಪನೆಯನ್ನು ವಿವರಿಸಿರಿ.

(ಡಿ) ಬಾದಾಮಿಯ ಗುಹಾದೇವಾಲಯಗಳ ಮಹತ್ವವನ್ನು ವಿವರಿಸಿರಿ.

## ಭಾಗ B

*10×10=100*

*ಪ್ರತಿಯೊಂದು ಪ್ರಶ್ನೆಗೂ 100 ಶಬ್ದಗಳ ಮಿತಿಯಲ್ಲಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.*

**2.** ದಕ್ಷಿಣ ದ್ರಾವಿಡ ಗುಂಪಿಗೆ ಸೇರಿದ ಭಾಷೆಗಳಾವುವು ? ಅವುಗಳ ಲಕ್ಷಣಗಳ ಬಗ್ಗೆ ವಿವರಿಸಿರಿ.

**3.** ಕನ್ನಡ ಭಾಷೆಯ ಲಿಂಗ-ವಚನ ವ್ಯವಸ್ಥೆಯನ್ನು ಪರಿಚಯಿಸಿರಿ.

**4.** ಜನ್ನನ 'ಯಶೋಧರ ಚರಿತೆ'ಯ ಕಥಾವಸ್ತುವನ್ನು ನಿರೂಪಿಸಿರಿ.

**5.** ಬಸವಣ್ಣನವರ ವಚನಗಳಲ್ಲಿ ವ್ಯಕ್ತವಾಗಿರುವ ಅಂತರಂಗ ಶೋಧನೆಯನ್ನು ವಿಮರ್ಶಿಸಿರಿ.

**6.** ಚಿತ್ರಾಂಗದ ಕಾವ್ಯದ ವಸ್ತು-ವಿನ್ಯಾಸವನ್ನು ಪರಿಶೀಲಿಸಿರಿ.

**7.** ಚಾಮರಸನ ಪ್ರಭುಲಿಂಗ ಲೀಲೆಯಲ್ಲಿ ಕಾಣುವ ಅಲ್ಲಮನ ವ್ಯಕ್ತಿತ್ವವನ್ನು ವಿವರಿಸಿರಿ.

**8.** ವಡ್ಡಾರಾಧನೆಯ ಕಥೆಯೊಂದರ ಮೂಲಕ ಕಥಾಹಂದರದ ವಿನ್ಯಾಸವನ್ನು ಚರ್ಚಿಸಿರಿ.

**9.** ಕಾವ್ಯದ ಔಚಿತ್ಯ ಮತ್ತು ಪ್ರಯೋಜನಗಳನ್ನು ಪರಿಶೀಲಿಸಿರಿ.

**10.** ರಸವನ್ನು ಕುರಿತು ಇದುವರೆಗೆ ನಡೆದ ಚರ್ಚೆ ಹಾಗೂ ರಸಗಳ ಸಂಖ್ಯಾ ನಿರ್ಣಯವನ್ನು ವಿವರಿಸಿರಿ.

**11.** ವಿಜಯನಗರ ಅರಸರು ಕರ್ನಾಟಕಕ್ಕೆ ನೀಡಿದ ಸಾಂಸ್ಕೃತಿಕ ಕೊಡುಗೆಗಳ ಬಗ್ಗೆ ಚರ್ಚಿಸಿರಿ.

## ಭಾಗ C

*6×15=90*

*ಒಂದೊಂದು ಪ್ರಶ್ನೆಗೂ 150 ಶಬ್ದಗಳ ಮಿತಿಯಲ್ಲಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.*

**12.** ಭಾಷೆಯ ವರ್ಗೀಕರಣ ವಿಧಾನಗಳನ್ನು ವಿವರಿಸಿರಿ.

**13.** ಕನ್ನಡ ಭಾಷೆಯ ಮೇಲೆ ಆದ ಅನ್ಯಭಾಷೆಗಳ ಪ್ರಭಾವವನ್ನು ಗುರುತಿಸಿರಿ.

**14.** ರನ್ನನ ಗದಾಯುದ್ಧದ ಕಥಾಪ್ರಸಂಗದ ವಿಶಿಷ್ಟತೆಯನ್ನು ಚರ್ಚಿಸಿರಿ.

**15.** ಕುವೆಂಪು ಅವರ ಅಖಂಡ ದೃಷ್ಟಿಯಲ್ಲಿ ರೂಪತಾಳಿದ ಅಹಲ್ಯೆಯ ಪಾತ್ರದ ವೈಶಿಷ್ಟ್ಯವನ್ನು ಚರ್ಚಿಸಿರಿ.

**16.** ವಿಮರ್ಶೆಯ ಸ್ವರೂಪ ಮತ್ತು ಅದರ ಬಗೆಗಳನ್ನು ವಿವರಿಸಿರಿ.

**17.** ಕರ್ನಾಟಕದ ಏಕೀಕರಣಕ್ಕೆ ಉತ್ತರ ಕರ್ನಾಟಕದ ಮಹನೀಯರು ನೀಡಿದ ಕೊಡುಗೆಯನ್ನು ಪರಾಮರ್ಶಿಸಿರಿ.

## ಭಾಗ D

*3×30=90*

*ಒಂದೊಂದು ಪ್ರಶ್ನೆಗೂ 300 ಶಬ್ದಗಳ ಮಿತಿಯಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ.*

**18.** ಕನ್ನಡ ಭಾಷೆಯ ವಿವಿಧ ಘಟ್ಟಗಳನ್ನು ಪುನರ್‌ರಚಿಸಿ ವಿವರಿಸಿರಿ.

**19.** ಇವುಗಳಲ್ಲಿ ಯಾವುದಾದರೂ ಎರಡನ್ನು ಕುರಿತು ಬರೆಯಿರಿ :

(ಎ) ಅಕ್ಕಮಹಾದೇವಿ ಕಲ್ಪಿಸಿಕೊಂಡ ಚನ್ನಮಲ್ಲಿಕಾರ್ಜುನ

(ಬಿ) ನಯಸೇನನ ಧರ್ಮಾಮೃತ

(ಸಿ) ಪ್ರತಿಭೆಯ ಸ್ವರೂಪ

(ಡಿ) ಹೊನ್ನಮ್ಮನ ಸ್ತ್ರೀಪರ ಕಾಳಜಿ

**20.** ಕೃತಿ ಮತ್ತು ಸಹೃದಯನ ನಡುವೆ ಇರುವ ಸಂಬಂಧಾಂತರಗಳನ್ನು 'ಮಾನಸಿಕ ದೂರ' ಪರಿಕಲ್ಪನೆ ಹೇಗೆ ವಿವರಿಸುತ್ತದೆ ? ಚರ್ಚಿಸಿರಿ.

**21.** ಆಧುನಿಕ ಕನ್ನಡ ಸಾಹಿತ್ಯದ ಪ್ರಕಾರಗಳಾವುವು ? ಚರ್ಚಿಸಿರಿ.

**22.** ಕರ್ನಾಟಕದ ವಾಸ್ತುಶಿಲ್ಪದ ಹಿನ್ನಲೆಯಲ್ಲಿ ಹೊಯ್ಸಳರ ಕೊಡುಗೆಗಳನ್ನು ಪರಾಮರ್ಶಿಸಿರಿ.

28/2

# 2010

# ಕನ್ನಡ ಸಾಹಿತ್ಯ

## ಪತ್ರಿಕೆ 2

*ಸಮಯ : 3 ಗಂಟೆ ]* *[ ಗರಿಷ್ಠಾಂಕಗಳು : 300*

---

**ಸೂಚನೆಗಳು**

*ವಿಭಾಗ **A, B** ಮತ್ತು **C** ಗಳಲ್ಲಿನ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಬೇಕು. ಆದರೆ ವಿಭಾಗ **D** ಯಲ್ಲಿ ಮೂರು ಪ್ರಶ್ನೆಗಳನ್ನಷ್ಟೇ ಆರಿಸಿ ಉತ್ತರಿಸಬೇಕು. ಪ್ರಶ್ನೆಗಳ ಅಂಕಗಳನ್ನು ಆಯಾ ವಿಭಾಗದ ಮುಂದೆಯೇ ನೀಡಲಾಗಿದೆ.*

*ಉತ್ತರಗಳು ಕನ್ನಡದಲ್ಲಿಯೇ ಇರತಕ್ಕದ್ದು.*

SEAL

[Turn over

**ಭಾಗ A** 4×5=20

*ಈ ಕೆಳಗಿನ ಪದ್ಯಗಳ ಭಾವ ಮತ್ತು ಸ್ವಾರಸ್ಯವನ್ನು ವಿವರಿಸಿ.*

1. (ಎ) ಭೇದಿಸಲೆಂದೆ ದಲ್ ನುಡಿದರೆನ್ನದಿರೊಯ್ಯನೆ ಕೇಳ ಕರ್ಣ ನಿ
ನ್ನಾದಿಯೊಳಬ್ಬೆ ಕೊಂತಿ ನಿನಗಮ್ಮನಹರ್ಪತಿ ಪಾಂಡುನಂದನರ್
ಸೋದರರೆಯ್ದೆ ಮಯ್ದುನನೆನಾಂ ಪೇಱುತೇಂ ಪಡೆಮಾತೊ ನಿನ್ನದೀ
ಮೇದಿನಿ ಪಟ್ಟಮುಂ ನಿನತೆ ನೀನಿರೆ ಮತ್ತೆ ಪೆಱರ್ ನರೇಂದ್ರರೇ

(ಬಿ) ನೆಲದೊಳರ್ಧವನೀವುದಿಲ್ಲಾ
ಸ್ಥಳವನೈದನು ಮುನ್ನ ಕೊಡೆನೆ
ನ್ನಿಳೆಯ ಭಾಗವನೀಸ ಕೊಟ್ಟಡೆ ನಿನ್ನ ಮೇಲಾಣೆ |
ನೆಲನ ಕಡೆಯಲಿ ಮುಳ್ಳು ಮೊನೆಯು
ಚ್ಚಳಿಪ ಧರಣಿಯನಿತ್ತನಾದರೆ
ಬಳಿಕ ನೀ ನಗು ಹೋಗು ಕದನವ ಕೊಂಡು ಬಾ ಎಂದ ||

(ಸಿ) ಅಡವಿಯೊಳು ಹೊಲಬುಗೆಟ್ಟನೊ ಗಿಡವಿನೊಳಗೆ ಹುಲಿ
ಹಿಡಿದುದೋ ಕಳ್ಳರೊಯ್ದರೊ ಭೂತಸಂಕುಲಂ
ಹೊಡೆದುವೋ ನೀರೊಳದ್ದನೊ ಮರದ ಕೊಂಬೇಱಿ ಬಿದ್ದನೋ ಫಣಿ ತಿಂದುದೋ
ಕಡುಹಸಿದು ನಡೆಗೆಟ್ಟು ನಿಂದನೋ ಎಂದಿಂತು
ಮಡದಿ ಹಲವಂ ಹಲುಬುತಂಗಣದೊಳಿರೆ ಹೊತ್ತಿ
ಹೊಡಕರಿಸಿದಳಲ ಕರ್ಬೊಗೆಯಂತೆ ಕವಿದ ಕತ್ತಲೆಯೊಳಗೆ ನಿಂದಿರ್ದಳು

(ಡಿ) ನಡೆ ಬಸವಕೈಲಾಸಗಿರಿಗೆ ಪುಷ್ಪಕದೊಳಗೆ
ಪೊಡವಿಯೊಳಗಿರವು ಸಾಲ್ವುದು ಬಾ ಮಗನೆ ನಿನಗೆ |
ಎನೆ ಕೇಳ್ದು ನಸುನಗುತೆ ನುಡಿದನಾ ಸಂಗಂಗೆ
ಮನಸಿಜಹರಂಗೆ ಗಿರಿಶಂಗೆ ಗಿರಿಜೇಶಂಗೆ |
ಸಂಗಯ್ಯ ಬಾಯೆಂದು ಕರೆವೆ ನೀನೆನ್ನುವಂ
ಪಿಂಗಲೀಯದು ಶರಣಗೋಷ್ಠಿ ಕೇಳೆನ್ನುವಂ |
ಶರಣರೊಕ್ಕುದಱ ಸವಿ ಕೈಲಾಸದೊಳಗುಂಟೆ
ಶರಣಸಂಗದ ಸುಖಂ ಕೈಲಾಸದೊಳಗುಂಟೆ |
ಇಲ್ಲಿಯ ಸುಖಂ ದೇವ ಅಲ್ಲಿಯುಳ್ಳಡೆ ಲೇಸು
ಅಲ್ಲೆನ್ನ ಈಗಳೇ ಕೊಂಡು ಹೋಹುದು ಲೇಸು |

## ಭಾಗ B

*10×10=100*

*ಒಂದೊಂದು ಪ್ರಶ್ನೆಗೂ 100 ಶಬ್ದಗಳ ಮಿತಿಯಲ್ಲಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.*

**2.** ಕನ್ನಡ ನವೋದಯ ಸಾಹಿತ್ಯ ಪಡೆದುಕೊಂಡ ಪ್ರೇರಣೆಗಳಾವುವು ? ಚರ್ಚಿಸಿರಿ.

**3.** ಭೀಷ್ಮರಿಗೆ ವೀರಪಟ್ಟ ಕಟ್ಟಿದ ಸಂದರ್ಭದಲ್ಲಿ ಕರ್ಣನ ಅಸಹನೆ ಹಾಗೂ ಅದಕ್ಕೆ ದ್ರೋಣ ಭೀಷ್ಮರು ನೀಡುವ ಪ್ರತಿಕ್ರಿಯೆಗಳು ಪಂಪ ಭಾರತದಲ್ಲಿ ಹೇಗೆ ವ್ಯಕ್ತವಾಗಿವೆ ? ಚರ್ಚಿಸಿರಿ.

**4.** ಮಹಾಭಾರತದ ಸನ್ನಿವೇಶ ತೆಗೆದುಕೊಂಡು 'ಬೆರಳ್ಗೆ ಕೊರಳ್' ನಾಟಕದಲ್ಲಿ ಕುವೆಂಪು ಏನನ್ನು ಹೇಳಬಯಸಿದ್ದಾರೆ ? ವಿವರಿಸಿರಿ.

**5.** ಶ್ರೀಕೃಷ್ಣ ಮತ್ತು ಕುಂತಿ ಕರ್ಣನ ಮನಸ್ಸನ್ನು ಭೇದಿಸಿದ ಪ್ರಸಂಗಗಳನ್ನು ಕುಮಾರವ್ಯಾಸ ಹೇಗೆ ಚಿತ್ರಿಸಿದ್ದಾನೆ ? ವಿವರಿಸಿರಿ.

**6.** ಪ್ರಕೃತಿ ಮತ್ತು ಮನುಷ್ಯ ಸಂಬಂಧಗಳ ಸಂಯೋಜನೆ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಹೇಗೆ ಅಭಿವ್ಯಕ್ತಿ ಪಡೆದಿದೆ ಎಂಬುದನ್ನು ಚರ್ಚಿಸಿ.

**7.** ಭರತೇಶ ವೈಭವ ಸಾರುವ ಆಧ್ಯಾತ್ಮದ ಪರಿಕಲ್ಪನೆಯನ್ನು ವಿವರಿಸಿರಿ.

**8.** ಬೇಂದ್ರೆಯವರ 'ಸಾವಿನ ಕೂಡ ಸರಸ' ಪ್ರಬಂಧದಲ್ಲಿ ವ್ಯಕ್ತವಾಗಿರುವ ವ್ಯಕ್ತಿಯ ಸಾವು ಮತ್ತು ಬದುಕಿನ ಹೊಯ್ದಾಟದ ಕ್ಷಣಗಳನ್ನು ವಿವರಿಸಿರಿ.

**9.** ಹರಿಶ್ಚಂದ್ರನ ಸತ್ಯಪಾಲನೆಯಲ್ಲಿ ಚಂದ್ರಮತಿ ಅನುಭವಿಸಿದ ಯಾತನೆ, ತೋರಿದ ಬದ್ಧತೆಯನ್ನು ವಿವರಿಸಿರಿ.

**10.** ಭಾರತೀಪುರ ಕಾದಂಬರಿಯ ನಾಯಕನ ವೈಚಾರಿಕತೆಯ ಗಟ್ಟಿತನ ಹಾಗೂ ಮಿತಿಗಳ ಬಗ್ಗೆ ಚರ್ಚಿಸಿರಿ.

**11.** ಗರತಿಯ ಹಾಡುಗಳಲ್ಲಿ ಕಂಡು ಬರುವ ಹೆಣ್ಣಿನ ಜೀವನ ಶ್ರದ್ಧೆಯನ್ನು ವಿವರಿಸಿರಿ.

[Turn over

6×15=90

## ಭಾಗ C

*ಒಂದೊಂದು ಪ್ರಶ್ನೆಗೂ 150 ಶಬ್ದಗಳ ಮಿತಿಯಲ್ಲಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.*

**12.** ಕನ್ನಡ ಬಾವುಟ ಸಂಕಲನದಲ್ಲಿಯ ಕವಿತೆಗಳ ಆಶಯವನ್ನು ಚರ್ಚಿಸಿರಿ.

**13.** ಎ.ಕೆ. ರಾಮಾನುಜನ್ ಅವರ "ಅಂಗುಲ ಹುಳುವಿನ ಪರಕಾಯ ಪ್ರವೇಶ" ಮತ್ತು ಪು.ತಿ. ನರಸಿಂಹಾಚಾರ್ ಅವರ "ನೆರಳು" ಕವಿತೆಗಳನ್ನು ವಿಮರ್ಶಿಸಿ ಅವುಗಳ ಆಶಯಗಳನ್ನು ವಿವರಿಸಿರಿ.

**14.** ಪರಂಪರೆ ಮತ್ತು ಆಧುನಿಕತೆಗಳ ಸಂಘರ್ಷ ಚೋಮನದುಡಿಯಲ್ಲಿ ಹೇಗೆ ವ್ಯಕ್ತವಾಗಿದೆ ? ಚರ್ಚಿಸಿ.

**15.** ಬಸವರಾಜದೇವರ ರಗಳೆಯಲ್ಲಿ ನಿರೂಪಿತವಾದ ಬಸವ-ಬಿಜ್ಜಳರ ಸಂಬಂಧ ಹಾಗೂ ವ್ಯಕ್ತಿತ್ವವನ್ನು ವಿವರಿಸಿರಿ.

**16.** ಅಶ್ವತ್ಥಾಮನ್ ನಾಟಕದಲ್ಲಿ ಲೇಖಕರು ಮಾಡಿಕೊಂಡಿರುವ ಮಾರ್ಪಾಡುಗಳ ಮಹತ್ವದ ಅಂಶಗಳನ್ನು ಚರ್ಚಿಸಿರಿ.

**17.** ಸರ್ವಜ್ಞನ ವಚನಗಳಲ್ಲಿ ಕಂಡುಬರುವ "ಜ್ಞಾನದ" ಚಿಂತನೆಗಳಾವುವು ? ಚರ್ಚಿಸಿರಿ.

## ಭಾಗ D

*3×30=90*

*ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರಕ್ಕೆ ಉತ್ತರ ಬರೆಯಿರಿ. ಪ್ರತಿ ಪ್ರಶ್ನೆಗೂ 300 ಶಬ್ದಗಳ ಮಿತಿಯಲ್ಲಿ ಉತ್ತರ ಬರೆಯಿರಿ.*

**18.** ಜೀವಾತ್ಮನು ಪರಮಾತ್ಮನಾಗುವ ಪರಿಯನ್ನು ಆದಿನಾಥನ ಭವಾವಳಿಗಳ ಹಿನ್ನೆಲೆಯಲ್ಲಿ ಪಂಪ ಹೇಗೆ ಚಿತ್ರಿಸಿದ್ದಾನೆ ? ಚರ್ಚಿಸಿರಿ.

**19.** ಹರಿಶ್ಚಂದ್ರ ಕಾವ್ಯದಲ್ಲಿ ನಿರೂಪಣಾ ತಂತ್ರವಾಗಿ ಕಂಡು ಬರುವ ನಾಟಕೀಯತೆ ಕವಿಪ್ರತಿಭೆಗೆ ಸಾಕ್ಷಿಯಾಗಿರುವ ಬಗೆಯನ್ನು ವಿವರಿಸಿರಿ.

**20.** ಬಸವಣ್ಣನವರ ವಚನಗಳಲ್ಲಿ ವ್ಯಕ್ತವಾದ ವ್ಯಷ್ಟಿ ಮತ್ತು ಸಮಷ್ಟಿ ಪ್ರಜ್ಞೆಯನ್ನು ಪರಿಚಯಿಸಿರಿ.

**21.** ಪಠ್ಯದಲ್ಲಿರುವ "ಗಿರಿಜಾಕಂಡ ಸಿನಿಮಾ" ಮತ್ತು "ನಲ್ಲಿಯಲ್ಲಿ ನೀರು ಬಂದಿತು !!!" ಕಥೆಗಳ ಆಶಯಗಳನ್ನು ವಿವರಿಸಿರಿ.

**22.** ಗಾದೆ ಹಾಗೂ ಒಗಟುಗಳಲ್ಲಿ ಜನಸಾಮಾನ್ಯರ ಅನುಭವಗಳು ಮಡುಗಟ್ಟಿರುವ ರೀತಿಯನ್ನು ಚರ್ಚಿಸಿರಿ.